**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10042/2021**

**ಪ್ರಮಾಣ ವಚನ ಭೋದಿಸಿದ ದಿನಾಂಕಃ 13–02–2025**

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಿಂದಃ**

ನಾನು ಫ್ರಾಸಾ1 ರವರ ಮನೆಯಲ್ಲಿ ನಾನು ಸುಮಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಎಂದರೆ ಹೌದು. ಫ್ರಾಸಾ1 ರವರ ಮನೆಗೆ ಆರೋಪಿ ಕೆಲಸಕ್ಕೆ ಬರುತ್ತಿದ್ದನು ಎಂದರೆ ನಾನು ನೋಡಿದ ಹಾಗೆ ಅವರು ಕೆಲಸಕ್ಕೆ ಬಂದಿಲ್ಲ ಎಂದು ನುಡಿಯುತ್ತಾರೆ. ಗಲಾಟೆಯಾದ ದಿನ ನಾನು ಜೋಳ ಮುರಿದಿದ್ದನ್ನು ತುಂಬಿಸಲು ಹೋಗಿದ್ದೆವು. ಗಲಾಟೆಯಾಗುವುದಕ್ಕಿಂತ ಮೊದಲು 2 ಲೋಡ್ ಜೋಳವನ್ನು ಹೊಡೆದಿರುತ್ತೇವೆ. 3 ನೇ ಲೋಡ್ ಗೆ ಘಟನೆಯಾಗಿರುತ್ತದೆ. ಜೋಳವನ್ನು ಬೆಳಿಗ್ಗೆ 10 ಗಂಟೆಯಿಂದ ತುಂಬಿಸುತ್ತಿದ್ದೆವು. 3 ನೇ ಲೋಡ್ ಜೋಳವನ್ನು ಮಧ್ಯಾಹ್ನ 2–30 ಗಂಟೆಗೆ ತುಂಬಿಸಿರುತ್ತೇವೆ. ಒಂದು ಲೋಡ್ ಜೋಳವನ್ನು ವಾಹನಕ್ಕೆ ತುಂಬಿಸಲು ಅರ್ಧ ಗಂಟೆ ಸಾಕು.

ಇದಕ್ಕೂ ಮೊದಲು 2 ಲೋಡ್ ಜೋಳವನ್ನು ಅದೇ ದಾರಿಯಲ್ಲಿ ಹೊಡೆದಿರುತ್ತೇವೆ. ಆಗ ವಾಹನ ಯಾವ ದಾರಿಯಲ್ಲಿ ಹೋಗಿತ್ತೋ ಆ ದಾರಿಯಲ್ಲಿ ಬರುತ್ತಿತ್ತು. ಮೊದಲು 2 ಲೋಡ್ ಗೆ ಯಾವ ತಕರಾರು ಮಾಡಿಲ್ಲ ಎಂದರೆ ಆ ಸಮಯದಲ್ಲಿ ಆರೋಪಿ ಇರಲಿಲ್ಲ. ಆ ದಿನ ನಾನು ಆರೋಪಿಯನ್ನು ನೋಡಿರುತ್ತೇನೆ. ಆರೋಪಿಗೂ ಮತ್ತು ಫ್ರಾಸಾ1 ರವರಿಗೆ ದ್ವೇಷ ಇತ್ತು ಎಂದು ಗೊತ್ತು ಆದರೆ ಯಾವ

ವಿಚಾರಕ್ಕೆ ಎಂದು ಗೊತ್ತಿಲ್ಲ. ಘಟನೆಯಾದ ಸಂದರ್ಭಕ್ಕಿಂತ ಮೊದಲು ಆರೋಪಿಯು ತನ್ನ ಗದ್ದೆಯಲ್ಲಿ ಇದ್ದ. ಮೊದಲು 2 ಲೋಡ್ ಹೋದಾಗ ಆರೋಪಿ ತಕರಾರು ಮಾಡಿಲ್ಲ ಎಂದರೆ 3 ನೇ ಲೋಡ್ ಗೆ ತಕರಾರು ಮಾಡಿರುತ್ತಾನೆ. ತುಂಬಿಸಿದ್ದ ಲೋಡ್ ನಲ್ಲಿ ನಾನು ಟ್ರಾಕ್ಟರ್ ನಲ್ಲಿ ಹತ್ತಿ ಹೋಗಲಿಲ್ಲ. ಟ್ರಾಕ್ಟರ್ ಲೋಡ್ ತುಂಬಿಸಿಕೊಂಡು ಹೋದಾಗ ನಾನು ಗದ್ದೆಯಲ್ಲಿ ಚೀಲದಲ್ಲಿ ಜೋಳ ತುಂಬಿಸುತ್ತಿದ್ದೆ. ನಾವು ಚೀಲದಲ್ಲಿ ತುಂಬಿಸಿದಂತಹ ಮೆಕ್ಕೆ ಜೋಳ ಸ್ಥಳದಲ್ಲೇ ಇಟ್ಟುಕೊಂಡಿದ್ದೆವು. ನಾನು ನಿಂತ ಜಾಗಕ್ಕೂ ಆರೋಪಿ ಟ್ರಾಕ್ಟರ್ ನಿಲ್ಲಿಸಿದ ಜಾಗಕ್ಕೂ ಸುಮಾರು 100 ಅಡಿ ದೂರ ಇತ್ತು. ನಾನು ಚೀಲ ತುಂಬುವುದನ್ನು ನೋಡುತ್ತಿದ್ದೆ ಟ್ರಾಕ್ಟರ್ ಹೋಗುವುದನ್ನು ನೋಡುತ್ತಿರಲಿಲ್ಲ ಎಂದರೆ ನಾನು ಜೋಳವನ್ನು ಚೀಲಕ್ಕೆ ತುಂಬಿಸಿಕೊಂಡು ಟ್ರಾಕ್ಟರ್ ಹೋಗುವುದನ್ನು ನೋಡಿರುತ್ತೇನೆ.

ಟ್ರಾಕ್ಟರ್ ತುಂಬಾ ಜೋಳ ತುಂಬಿಸಿದ್ದರಿಂದ ಗದ್ದೆಯಲ್ಲಿ ಉಬ್ಬು ತಗ್ಗು ಇರುವುದರಿಂದ ಜೋಳ ಬೀಳಬಹುದು ಎಂದು ನಾನು ಟ್ರಾಕ್ಟರ್ ಕಡೆ ನೋಡಿರುತ್ತೇನೆ. ಟ್ರಾಕ್ಟರ್ ನ ಇಂಜಿನ ಮೇಲೆ ಡ್ರೈವರ್ ಒಬ್ಬರೇ ಇದ್ದರು, ಬೇರೆ ಯಾರೂ ಇರಲಿಲ್ಲ. ಉಳಿದವರು ಟ್ರೇಲರ್ ಮೇಲೆ ಕೂತಿದ್ದರು. ಉಳಿದವರು ಟ್ರಾಕ್ಟರ್ ನಲ್ಲಿ ಇದ್ದಂತಹ ಜೋಳದ ಜೊತೆಗೆ ಟ್ರೈಲರ್ ಮೇಲೆ ಕೂತಿದ್ದರು. ಡ್ರೈವರ್ ಸೀಟ್ ನ ಮೇಲೆ ಯಾವುದೇ ಛಾವಣಿ ಇರಲಿಲ್ಲ.

ಘಟನೆಯ ಹಿಂದಿನ ದಿನ ಯಾವುದೇ ಮಳೆ ಬಂದಿರಲಿಲ್ಲ. ಘಟನೆಯ ಜಾಗದಲ್ಲಿ ಜೋಳವನ್ನು ಬೆಳೆದಿರಲಿಲ್ಲ ಬೀಳು ಬಿದ್ದಂತಹ ಜಾಗ ಆಗಿತ್ತು. ಸುಮಾರು 1 ಎಕರೆ ಜಾಗ

ಬೀಳು ಬಿದ್ದಿತ್ತು. ನಾನು ಗಲಾಟೆಯಾದ 5 ನಿಮಿಷಕ್ಕೆ ನಾನು ಘಟನಾ ಸ್ಥಳಕ್ಕೆ ಹೋಗಿರುತ್ತೇನೆ. ಗಲಾಟೆಯಾದ 5 ನಿಮಿಷದ ಒಳಗೆ ಏನಾಯಿತುಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಆರೋಪಿಯು ದೊಣ್ಣೆ ತೆಗೆದುಕೊಂಡು ಹೋಗಿದ್ದನ್ನು ನೋಡಿರುತ್ತೇನೆ ಮತ್ತು ಹೊಡೆಯುವುದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಟ್ರಾಕ್ಟರ್ ಹೋಗುತ್ತಿದ್ದ ಒಂದು ಮಾರು ದೂರದಲ್ಲಿ ಆರೊಪಿ ಕೆಲಸ ಮಾಡುತ್ತಿದ್ದನು. ಆರೋಪಿ ಬೈದಾಡುವುದನ್ನು ನಾನು ನೋಡಿರುತ್ತೇನೆ. ಟ್ರೈಲರ್ ಮೇಲೆ ಕೂತ 3 ಜನ ವ್ಯಕ್ತಿಗಳು ಟ ್ರಾಕ್ಟರ್ ನಿಂದ ಕೆಳಗೆ ಇಳಿದು ಬಂದಿಲ್ಲ ಅವರು ನೋಡುತ್ತಿದ್ದರು.

ನಾನು ಹೋದ ನಂತರ ಟ್ರಾಕ್ಟರ್ ನಲ್ಲಿ ಕೂತ 3 ಜನರಿಗೆ ಆರೋಪಿ ಹೊಡೆಯುವುದನ್ನು ತಡೆಯಿರಿ ಎಂದು ನಾನು ಹೇಳಲಿಲ್ಲ. ಆರೋಪಿ ಫ್ರಾಸಾ2 ರವರಿಗೆ ಫ್ರಾಸಾ2 ರವರು ವಾಹನದಿಂದ ಕೆಳಗೆ ಇಳಿದ ನಂತರ ಹೊಡೆದಿರುತ್ತಾನೆ. ಆರೋಪಿ ಹೊಡೆದ ನಂತರ ಟ್ರೈಲರ್ ಮೇಲೆ ಕುಳಿತವರು ಬಂದು ಆರೋಪಿಯನ್ನು ತಡೆಯಲು ಪ್ರಯತ್ನಪಟ್ಟರಾ ಎಂದರೆ ಸಾಕ್ಷಿಯು ಅಷ್ಟರಲ್ಲಿ ಆರೋಪಿ ದೊಣ್ಣೆಯನ್ನು ಬಿಸಾಡಿ ಹೋಗಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿ ಮು ಮಾ 1 ಬೇಲಿ ಗೂಟದಿಂದ ಹೊಡೆದಿರುತ್ತಾರೆ. ಬೇಲಿ ಗೂಟಕ್ಕೆ ಒಂದು ಕಡೆ ಚೂಪು ಮಾಡಿರುತ್ತಾರೆ ಎಂದರೆ ಹೌದು.

ಮು ಮಾ 1 ರಲ್ಲಿ ಎರಡೂ ಕಡೆಗೂ ಚೂಪಾಗಿಲ್ಲ ಎಂದರೆ ಹೌದು. ನಿಪಿ6 ಮತ್ತು ನಿಪಿ7 ರಲ್ಲಿ ಜೋಳ ಬೆಳೆದಿರುವುದು ಕಂಡುಬರುತ್ತದೆ ಎಂದರೆ ಹೌದು. ನಿಪಿ 6 ಮತ್ತು ನಿಪಿ 7 ರಲ್ಲಿ ಜೋಳ ಬೆಳೆದಿರುವ ಸ್ಥಳ ಫ್ರಾಸಾ1 ರವರಿಗೆ ಸೇರಿದ್ದು ಎಂದರೆ ಹೌದು. ನಿಪಿ7

ರಲ್ಲಿ ಕಂಡುಬರುವ ದೊಣ್ಣೆ ಹಾಗೂ ಎಂ ಒ 1 ಬೇರೆ ಬೇರೆ ಎಂದರೆ ಸರಿಯಲ್ಲ. ನಿಪಿ 7 ರಲ್ಲಿ ಕಂಡುಬರುವ ದೊಣ್ಣೆಗೆ ಗಂಟು ಗಂಟು ಇರುತ್ತದೆ ಎಂದರೆ ಹೌದು.

ಮು ಮಾ 1 ನ್ನು ನಾನು ಇದೇ ಮೊದಲ ಸಲ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ಆರ್ ಸಿ ಸಿ ಸೆಂಟ್ರಿಂಗ್ ಗೆ ಉಪಯೋಗಿಸಿದಂತಹ ದೊಣ್ಣೆ ಎಂದರೆ ಸರಿಯಲ್ಲ. ಮು ಮಾ 1 ರಲ್ಲಿ ಸಿಮೆಂಟ್ ಅಂಶ ಇದೆ ಎಂದರೆ ಸರಿಯಲ್ಲ. ಪೋಲೀಸರು ತನಿಖೆ ಮಾಡುವ ಸಮಯದಲ್ಲಿ ಮು ಮಾ 1 ಹೌದೋ ಇಲ್ಲವೋ ಎಂದು ನನ್ನನ್ನು ಕೇಳಿಲ್ಲ. ನಾನು ಮು ಮಾ 1 ರ ಬಗ್ಗೆ ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ. ಫ್ರಾಸಾ1 ರವರ ಮನೆಯಲ್ಲಿ ನಾನು ತುಂಬಾ ವರ್ಷಗಳಿಂದ ಕೆಲಸ ಮಾಡುತ್ತಿದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಉಬ್ಬು ತಗ್ಗು ಇರುವ ಸ್ಥಳದಲ್ಲಿ ಟ್ರಾಕ್ಟರ್ ಹೋಗುವಾಗ ಟ್ರೈಲರ್ ಹಿಂದುಗಡೆ ತುಂಬಿದ್ದರೆ ಟ್ರೈಲರ್ ಸ್ವಲ್ಪ ಮೇಲೆ ಏಳುತ್ತದೆ ಎಂದರೆ ಸರಿಯಲ್ಲ. ನಾನು ಟ್ರಾಕ್ಟರ್ ನ್ನು ಚಾಲನೆ ಮಾಡುವುದಿಲ್ಲ ಅದರ ಬಗ್ಗೆ ಮಾಹಿತಿ ಇಲ್ಲ. ಟ್ರಾಕ್ಟರ್ ನ್ನು ತಗ್ಗು ಉಬ್ಬು ಇದ್ದ ಸ್ಥಳದಲ್ಲಿಃ ಇಳಿಸುವಾಗ ಓವರ್ ಲೋಡ್ ಆಗಿ ಅದು ಪಲ್ಟಿ ಆಗಿ ಫ್ರಾಸಾ2 ರವರ ತಲೆಗೆ ಪೆಟ್ಟಾಗಿರುತತದೆ ಎಂದರೆ ಸರಿಯಲ್ಲ. ಫ್ರಾಸಾ2 ರವರಿಗೆ ಆದಂತಹ ಪೆಟ್ಟನ್ನು ಉಪ್ಪಯೋಗಿಸಿಕೊಂಡು ಆರೋಪಿಗೆ ಮತ್ತು ಫ್ರಾಸಾ1 ರವರಿಗೆ ದ್ವೇಷ ಇದ್ದದ್ದರಿಂದ ಸುಳ್ಳು ಕೇಸನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಫ್ರಾಸಾ1 ರವರ

ಟ್ರಾಕ್ಟರ್ ಹೊಸದು ಎಂದರೆ ಹೌದು. ಎಷ್ಟು ವರ್ಷದು ಎಂದು ಗೊತ್ತಿಲ್ಲ. ಹೊಸ ಟ್ರಾಕ್ಟರ್ ಆದ ಕಾರಣ ಫ್ರಾಸಾ2 ರವರಿಗೆ ಟ್ರಾಕ್ಟರ್ ಚಾಲನೆ ಮಾಡಲು ಬರುತ್ತಿರಲಿಲ್ಲ ಅವರಿಗೆ ಡಿ ಎಲ್ ಇರಲಿಲ್ಲ ಹಾಗಾಗಿ ಬಿದ್ದು ಪೆಟ್ಟು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಘಟನೆ ದಿನ ಸ್ಥಳದಲ್ಲಿ ಇರಲಿಲ್ಲ ಯಾವುದೇ ಗಲಾಟೆಯನ್ನು ನಾನು ನೋಡಿಲಿಲ್ಲ ಸ್ಥಳದಲ್ಲಿ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಯು ಫ್ರಾಸಾ2 ರವರಿಗೆ ಬೈದಿಲ್ಲ, ಹೊಡೆದಿಲ್ಲ, ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ 1 ನ್ನು ಕೇಸಿಗಾಗಿ ಸೃಷ್ಟಿ ಮಾಡಿದ್ದು ಆರೋಪಿಗೂ ಮು ಮಾ 1 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).